ಅಂಗನವಾಡಿಗೋಸ್ಕರ ಸಾಕಷ್ಟು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದು ಬೇರೆ ರಾಜ್ಯಕ್ಕೆ ಅನಿವಾರ್ಯವಾಗಿ ಹೋಗುತ್ತಿದೆ. ನಮ್ಮ ಈ Agro products ನಲ್ಲಿ ಬರತಕ್ಕಂಥ ಯೂನಿಟ್ಸ್ ಒಂದು ಸರಿಯಾಗಿ ಕೆಲಸ ಮಾಡುತ್ತಿಲ್ಲ. 30 ವರ್ಷಗಳ ಹಿಂದಿನ ಹಳೆಯ ಮಿಷನ್‌ಗಳು. ನೀವು ಆ standard ಪ್ರಕಾರ ಇರುವುದಿಲ್ಲ ಹೀಗಾಗಿ produce ಮಾಡುವುದಕ್ಕೆ ಆಗುವುದಿಲ್ಲ. capacity ಕೊಡುವುದಿಲ್ಲ ಎನ್ನುವ ಕಾರಣ ಇದೆ. ದಯಮಾಡಿ ನನ್ನ ಒಂದು ಸಲಹೆ ಹೇಳುವುದಾದರೆ, ನೀವು ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಜಂಟಿಯಾಗಿ ಕುಳಿತುಕೊಂಡು ಯೂನಿಟ್ಸ್ ಅನ್ನು revive ಮಾಡಿದರೆ, ಕಾರ್ಮಿಕರಿಗೆ ನೌಕರನೂ ಕೊಡಬಹುದು, ರಾಜ್ಯದಲ್ಲಿ ಉತ್ಪಾದನೆಯಾಗುವ ಮೇಟರಿಯಲ್ ಕೊಡಬಹುದು. ಆಗಲೇ ಮಾನ್ಯ ಪಾಟೀಲ್‌ರವರು out dated ಆಗಿರುವಂಥ ಫುಡ್‌ನ್ನು ಸಪ್ಲೈ ಮಾಡುತ್ತೀರಿ ಎಂದು ಹೇಳಿದರು. ಇವೆಲ್ಲವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ದಯಮಾಡಿ ನೀವು ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ಕುಳಿತುಕೊಂಡು ಇದಕ್ಕೆ ಏನಾದರೊಂದು ತೀರ್ಮಾನ ಮಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ ಇಲ್ಲದಿದ್ದರೆ ಬಗೆಹರಿಯುವುದಿಲ್ಲ.

ಅಧ್ಯಕ್ಷರು: ಅವರ ಸಲಹೆಯನ್ನು ವಿಚಾರ ಮಾಡಿ.

ಶ್ರೀ ಎ.ಎಸ್. ರವೀಂದ್ರನಾಥ್: ಮಾನ್ಯ ಜಯಚಂದ್ರರವರ ಸಲಹೆ ಉತ್ತಮವಾಗಿದೆ. ಅವರು ಹೇಳಿದ ಹಾಗೆ ಈ ಬಗ್ಗೆ ಕುಳಿತು ಚರ್ಚಿಸಿ ಮುಂದೆ ಏನು ಅನುಕೂಲ ಮಾಡಬೇಕೋ ಆ ನಿಟ್ಟಿನಲ್ಲಿ ಮುಂದೆ ಪ್ರಯತ್ನ ಮಾಡಲಾಗುವುದು.

ಉತ್ತರ ಕನ್ನಡ ಜಿಲ್ಲೆಯ ವಾಣಿಜ್ಯ ಹಾಗೂ ಮೀನುಗಾರಿಕೆ ಬಂದರುಗಳ ಬಗ್ಗೆ

715 ಶ್ರೀ ನಾಯ್ಕ ಜೆ.ಡಿ. (ಭಟ್ಕಳ) ಮಾನ್ಯ ಜೀವಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ವಾಣಿಜ್ಯ ಹಾಗೂ ಮೀನುಗಾರಿಕೆ ಬಂದರುಗಳು ಯಾವುವು; (ವಿವರ ನೀಡುವುದು)

ಆ) ಈ ಬಂದರುಗಳ ಪೈಕಿ ವಿಶೇಷವಾಗಿ ಕಾರವಾರ ಹಾಗೂ ಅಂಕೋಲಾದ ಬೆಲಿಕೇರಿ ಬಂದರುಗಳಿಗೆ ಜಮೀನು ಇರುವುದೆಷ್ಟು; (ಸರ್ವೆವಾರು ವಿಸ್ತೀರ್ಣದ ವಿವರ ಒದಗಿಸುವುದು)

ಇ) ಕಾರವಾರ ಹಾಗೂ ಬೆಲಿಕೇರಿಯಲ್ಲಿ ಬಂದರು ಜಮೀನುಗಳನ್ನು ಯಾವ ಉದ್ದೇಶಕ್ಕಾಗಿ ಎಷ್ಟು ಜನರಿಗೆ ಗುತ್ತಿಗೆ ನೀಡಲಾಗಿದೆ;

ಈ) ಬಂದರಿಗೆ ಸಂಬಂಧಿಸಿದ ಜಾಗದಲ್ಲಿ ಅತಿಕ್ರಮಣ ಮಾಡಿ ವ್ಯವಹಾರ ನಡೆಸುತ್ತಿರುವವರ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)

ಶ್ರೀ ಜೆ. ಕೃಷ್ಣ ಪಾಲೇಮಾರ್ (ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆಯ ವಾಣಿಜ್ಯ ಬಂದರುಗಳು : ಕಾರವಾರ, ಸದಾಶಿವಗಡ, ಬೇಲಿಕೇರಿ, ತದಡಿ, ಹೊನ್ನಾವರ ಹಾಗೂ ಭಟ್ಕಳ, ಉತ್ತರ ಕನ್ನಡ ಜಿಲ್ಲೆಯ ಮೀನುಗಾರಿಕೆ ಬಂದರುಗಳು:ಕಾರವಾರ, ಆಮದಳ್ಳಿ, ಬೇಲಿಕೇರಿ, ತದಡಿ ಹಾಗೂ ಹೊನ್ನಾವರ.

ಆ) ಕಾರವಾರ ಬಂದರು = 172–06–00 ಎಕರೆ

ಬೇಲಿಕೇರಿ ಬಂದರು = 64–34–10 ಎಕರೆ

ಒಟ್ಟು 237–00–10 ಎಕರೆ

(ಸರ್ವೆವಾರು ವಿಸ್ತೀರ್ಣದ ವಿವರಗಳನ್ನು ಅನುಕ್ರಮವಾಗಿ ಅನುಬಂಧ–1ರಲ್ಲಿ ನೀಡಲಾಗಿದೆ)

ಇ) ಕಾರವಾರ ಬಂದರಿನಲ್ಲಿ ಒಟ್ಟು 10 ಜನ ಬಂದರು ಬಳಕೆದಾರರಿಗೆ 23–25–00 ಎಕರೆ ಬಂದರು ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ಬಂದರು ಚಟುವಟಿಕೆ ಉದ್ದೇಶಕ್ಕಾಗಿ ನೀಡಲಾಗಿದೆ.

ಬೇಲಿಕೇರಿ ಬಂದರಿನಲ್ಲಿ 11 ಜನರಿಗೆ ಒಟ್ಟು 63–38–00 ಎಕರೆ ಜಾಗೆಯನ್ನು ಜಟ್ಟಿ ನಿರ್ಮಾಣ, ಕಬ್ಬಿಣದ ಅದಿರು ದಾಸ್ತಾನು ವೇಬ್ರಿಡ್ಜ್ ಹಾಗೂ ಡಿಸೇಲ್ ಬಂಕ್ ಉದ್ದೇಶಕ್ಕೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ.

ಈ) ಕಾರವಾರ ಬಂದರು:

ಕಾರವಾರ ಬಂದರಿನಲ್ಲಿ 47–06–00 ಎಕರೆಯಲ್ಲಿ ಹಿಂದಿನ ನಿವಾಸಿತರು ಅನಧಿಕೃತವಾಗಿ ತಮ್ಮ ವಾಸ್ತವ್ಯವನ್ನು ಸದರಿ ಜಾಗೆಯಲ್ಲಿ ಮುಂದುವರಿಸಿರುತ್ತಾರೆ. ತಹಶೀಲ್ದಾರ್ ಕಾರವಾರ ಇವರ 2007ರ ಸಮೀಕ್ಷೆ ಪ್ರಕಾರ ಸುಮಾರು 600ರಷ್ಟು ಕುಟುಂಬಗಳು ಅನಧಿಕೃತವಾಗಿ ವಾಸಿಸುತ್ತಿರುವುದು ತಿಳಿದು ಬಂದಿದೆ.

ಬೇಲಿಕೇರಿ ಬಂದರು:

ಬೇಲಿಕೇರಿ ಬಂದರಿನಲ್ಲಿ ಜಾಗವನ್ನು ಅತಿಕ್ರಮಣ ಮಾಡಿರುವವರ ಸಂಖ್ಯೆ: 3. ಅವರುಗಳ ವಿವರಗಳು ಈ ಕೆಳಕಂಡಂತಿವೆ:

1. ಮೆ: ಅದಾನಿ ಎಂಟರ್‌ಪ್ರೈಸಸ್ – 28500 ಚ.ಮೀ.
2. ಮೆ: ಸಾಲಗಾಂವಕಲ್ ಮೈನಿಂಗ್ ಇಂಡಸ್ಟ್ರೀಸ್ – 22000 ಚ.ಮೀ
3. ಶ್ರೀ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್ – 22300 ಚ.ಮೀ

ಒಟ್ಟು – **72800 ಚ.ಮೀ.**

ಅನುಬಂಧ – 1

ಕಾರವಾರ ಬಂದರಿನಲ್ಲಿರುವ ಸರ್ವೇವಾರು ಜಮೀನಿನ ವಿವರ

ಸರ್ವೆ ನಂ.	ಕ್ಷೇತ್ರ ಎಕರೆ–ಗುಂಟೆ–ಆಣೆ
1	2–06–00
2	0–18–06
3	00–36–00
4	01–02–00
5	00–35–00
6	00–37–00
7	00–32–00
8	01–00–00
9	01–00–00
10	00–33–00
11	00–35–00
12	00–30–00
13	00–32–00
14	02–28–00

1	2
15	00–31–00
16	00–08–00
17	01–07–00
18	01–14–00
19	02–05–00
20	01–36–00
21	00–15–00
22	00–34–00
23	04–07–00
24	01–37–00
25	01–25–00
26.	03–07–00
27	10–33–00
28	01–21–00
29	02–16–00
30	01–25–00
31	0–18–00
32	00–36–00
33	01–25–00
34	04–03–00
35	04–02–00
36	06–13–00
37	02–30–00

1	2
38	01–12–00
39	02–10–00
40	01–14–00
41	02–11–00
42	33–12–00
43	06–17–00
45	03–05–00
48	00–14–00
49	00–29–00
50	00–24–00
51	00–13–00
52	01–20–00
54	00–30–00
55	01–28–00
56	00–26–00
57	00–30–00
58	01–36–00
59	01–14–00
60	02–15–00
61	00–22–00
62	01–20–00
63	00–19–00
64	00–25–00

1	2
65	00–27–00
66	00–29–00
67	00–35–06
68	00–24–00
69	00–21–00
70	00–27–00
71	00–14–00
72	00–18–00
73	00–10–00
74	00–09–00
75	00–35–00
76	00–28–00
77	00–14–00
78	00–15–00
79	00–12–00
80	00–13–00
81	00–12–00
82	00–14–00
83	00–10–00
84	00–10–00
85	00–08–00
86	00–09–00
87	00–10–00

1	2
88	00–10–00
89	00–11–00
90	00–22–00
91	00–09–00
92	00–30–00
93	00–29–00
94	00–30–00
95	00–31–00
1349	05–08–00
1378	05–08–00
1379	05–26–00
1380	04–10–00
1381	00–24–00
1441	00–17–00
1442	00–23–00
1444	00–27–00
1445	00–11–00
ಒಟ್ಟು	**172–06–00**

ಬೇಲೆಕೇರಿ ಬಂದರಿನಲ್ಲಿರುವ ಸರ್ವೆವಾಯು ಜಮೀನಿನ ವಿವರ:

	ಎ ಗು ಆ
ಸರ್ವೆ ನಂ. 193	60–36–00
ಸರ್ವೆ ನಂ. 194	01–00–00

ಸರ್ವೆ ನಂ. 196	01–06–00
ಸರ್ವೆ ನಂ. 197	01–00–00
ಸರ್ವೆ ನಂ. 198	00–32–10
ಒಟ್ಟು ಭೂಮಿ	**64–34–10**

ಶ್ರೀ ಜೆ.ಡಿ. ನಾಯ್ಕ್: ಉತ್ತರ ಕನ್ನಡ ಜಿಲ್ಲೆಯ ವಾಣಿಜ್ಯ ಬಂದರುಗಳು ಮತ್ತು ಮೀನುಗಾರಿಕೆ ಬಂದರುಗಳು ವಿವರಗಳನ್ನು ಕೇಳಿದ್ದೆ. ಅದರೊಟ್ಟಿಗೆ ಇರತಕ್ಕಂಥ ಜಮೀನಿನ ವಿಸ್ತೀರ್ಣ ಕೇಳಿದ್ದೇನೆ. ಈಗಾಗಲೇ ಆ ಜಮೀನಿನಲ್ಲಿ ಸಾಕಷ್ಟು ಜನ ಅತಿಕ್ರಮಣ ಮಾಡಿಕೊಂಡಿದ್ದಾರೆ. ಬೇರೆ ಬೇರೆ ಬಂದರು ಚಟುವಟಿಕೆಗಳನ್ನು ಮಾಡುತ್ತಿದ್ದಾರೆ. ಸರ್ವೆ ನಂಬರ್‌ವುಳ್ಳ ಜಮೀನುಗಳ ವಿವರಗಳನ್ನು ನಾನು ಕೇಳಿದ್ದೇನೆ. ಕಾರವಾರ ಬಂದರಿನಲ್ಲಿ 10 ಜನ ಮತ್ತು ಬೇಲಿಕೇರಿ ಬಂದರಿನಲ್ಲಿ 11 ಜನರ ಬಗ್ಗೆ ವಿವರ ಕೊಡಿ ಎಂದು ಕೇಳಿದ್ದೆ. ಆ ವಿವರ ಕೊಟ್ಟಿಲ್ಲ. ಇರುವ ಜಮೀನುಗಳು ಯಾವ ಗ್ರಾಮದಲ್ಲಿ ಬರುವ ಜಮೀನುಗಳೆಂದು ಹೇಳಿಲ್ಲ. ಮುಖ್ಯವಾಗಿ ಬೇಲಿಕೇರಿಯಲ್ಲಿ 3 ಜನ 72,800 ಚ.ಮೀ. ಜಮೀನನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆಂದು ಹೇಳಿದಿರಿ. ಅದರಿಂದ ಉತ್ಪನ್ನ ಬರುತ್ತವೆಯೋ? ಅಥವಾ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೀರೋ? ಅಥವಾ ಕೋರ್ಟಿನಿಂದ ಏನಾದರೂ ಡೈರೆಕ್ಷನ್ ಆಗಿವೆಯೋ ಈ ಬಗ್ಗೆ ತಾವು ಹೇಳಲಿಲ್ಲ. ಅದಕ್ಕಾಗಿ ತಮ್ಮನ್ನು ನಾನು ಕೇಳುವ ಮುಖ್ಯವಾದ ಉದ್ದೇಶ ಏನೆಂದರೆ, ಬೇಲಿಕೇರಿ ಮತ್ತು ಕಾರವಾರ ಬಂದರುಗಳಲ್ಲಿ especially mines ಸಂಗ್ರಹಣೆ ಮಾಡುವುದರಿಂದ ಅಲ್ಲಿ ಜನ ಜೀವನ ಬಹಳ ಕಷ್ಟವಾಗುತ್ತದೆ. ದಿನ ಅಲ್ಲಿ ಜನರು strike ಮಾಡುತ್ತಿದ್ದಾರೆ. ಲಾರಿಗಳನ್ನು ತಡೆಹಾಕಿ ಅಡ್ಡಹಾಕಿ strike ಮಾಡುತ್ತಿದ್ದಾರೆ. ಆ ಧೂಳಿನಿಂದ ಜನರ ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ. ಅದಕ್ಕಾಗಿ ನಾನು ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ, ಈ ರೀತಿಯಾಗಿ ಒತ್ತುವರಿ ಮಾಡುವುದಕ್ಕೆ ಅವಕಾಶ ಕೊಟ್ಟರೆ ಅಥವಾ ಈ ರೀತಿಯಾಗಿ ಮನಸ್ಸಿಗೆ ಬಂದ ಹಾಗೆ ಅತಿಕ್ರಮಣ ಮಾಡಿದರೆ, ಮನಸ್ಸಿಗೆ ಬಂದ ಹಾಗೆ ಈ ರೀತಿಯ ರಫ್ತು ವ್ಯವಹಾರ ಮಾಡುತ್ತಿದ್ದರೆ, ಹೇಗೆ? ಕಾರವಾರ ಬಂದರಿನಲ್ಲಿ ಕೂಡ ಮೈನ್ಸ್ ಅಲ್ಲದೆ ಕಲ್ಲುಗಳು ಬೇರೆ ಬೇರೆ ಚಟುವಟಿಕೆಗಳನ್ನು ಮಾಡುವ ಬಗ್ಗೆ ಅನುಮತಿ ಕೊಟ್ಟಿದ್ದರೆ ಅದರ ಬಗ್ಗೆ ಇಲ್ಲಿ ವಿವರ ಕೊಟ್ಟಿಲ್ಲ. ಆ ಬಗ್ಗೆ ವಿವರ ಕೊಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಕೃಷ್ಣ ಪಾಲೇಮಾರ್: ಮಾನ್ಯ ಅಧ್ಯಕ್ಷರೆ, ಸದಸ್ಯರು ವಿವರ ಕೊಟ್ಟಿಲ್ಲವೆಂದು ಹೇಳಿದರು. ಬೇಲಿಕೇರಿ ಬಂದರಿನಲ್ಲಿ 11 ಜನರಿಗೆ ಬೇರೆ ಬೇರೆ ಕಂಪನಿಗಳಿಗೆ ಭೂಮಿಯನ್ನು ಗುತ್ತಿಗೆಯಾಧಾರದ ಮೇಲೆ ಕೊಟ್ಟಿದ್ದಾರೆ. ಅದರ ಪಟ್ಟಿ ಬೇಕಾದರೆ ಈಗ ಕೊಡುತ್ತೇವೆ. ಅದಲ್ಲದೆ, ಕಾರವಾರದಲ್ಲೂ ಕೂಡ ಬೇರೆ ಬೇರೆ 11 ಕಂಪನಿಗಳಿಗೆ ಕೊಟ್ಟಿದ್ದಾರೆ. ಆದರೆ, ಈ 2003ರ ನಂತರ ಹೆಚ್ಚು ಜನರಿಗೆ ಬಂದರಿನಲ್ಲಿ ಲೀಸ್‌ನಲ್ಲಿ ವಿತರಣೆ ಮಾಡಿದ್ದಾರೆ. ಅದರಲ್ಲೂ ನಮ್ಮ ಕಾಲದಲ್ಲಿ ಏನು ಆಗಲಿಲ್ಲ. ಆದರೆ, 72,800 ಚ.ಮಿ. ಭೂಮಿ ಅತಿಕ್ರಮಣವಾಗಿದೆ ಎನ್ನುವ ಲೆಕ್ಕವನ್ನು ಕೂಡ ನಾವು ಕೊಟ್ಟಿದ್ದೇವೆ. ಅಲ್ಲಿರುವಂಥ ಅವ್ಯವಸ್ಥೆಗೆ ಹೆಚ್ಚಿನ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ.ಡಿ. ನಾಯ್ಕ್: ಉತ್ತರ ಕನ್ನಡ ಜಿಲ್ಲೆಯಲ್ಲಿರುವಂಥ ಕಾರವಾರ, ಬೇಲಿಕೇರಿ, ಹೊನ್ನಾವರ, ತದಡಿ, ಇವೆಲ್ಲಾ ನೈಸರ್ಗಿಕವಾದ ಬಂದರುಗಳು. ಇವು ಇಲ್ಲಿಯವರೆಗೆ ಅಭಿವೃದ್ಧಿಯಾಗಿಲ್ಲ. ನಮ್ಮ ನೆರೆಯ ಜಿಲ್ಲೆಯಾದ ಮಂಗಳೂರಿಗೆ ಹೋದರೆ ನವ ಮಂಗಳೂರು ಬಂದರು ಸಾಕಷ್ಟು ಅಭಿವೃದ್ಧಿಯಾಗಿದೆ. ಯಾವುದೇ ಒಂದು ಬಂದರು ಕೂಡ ಅಭಿವೃದ್ಧಿಯಾಗಿಲ್ಲ. ಮತ್ತೊಂದು ಹೇಳುವುದಾದರೆ, ಈ ಬೇಲಿಕೇರಿ ಬಂದರಿನ ಸುಮಾರು 35 ಎಕರೆ ಜಮೀನು ಇದೆ ಅದು ಪಿಡಬ್ಲ್ಯೂಡಿಯಿಂದ ನಿಮ್ಮ ಪೋರ್ಟ್ ಇಲಾಖೆಗೆ ಹಸ್ತಾಂತರವಾಗಿದೆ. ಅಲ್ಲಿ ಲಾರಿ ನಿಲ್ಲಿಸುವುದು, ಅಲ್ಲಿ ಸ್ಟ್ಯಾಂಡ್ ಇಲ್ಲದೇ ಇರುವಂಥದ್ದು ಇದೆ, ಈ 35 ಎಕರೆಯಲ್ಲಿ ಏನು ಮಾಡಿದಿರಿ? ಅದರೊಟ್ಟಿಗೆ ಈ ಕಾರವಾರ ಬಂದರನ್ನು ಖಾಸಗಿ ವ್ಯಕ್ತಿಗಳಿಗೆ ಕೊಡುತ್ತಾರೆನ್ನುವ ಸುದ್ದಿಗಳು ಪತ್ರಿಕೆಗಳಲ್ಲಿ ಬರುತ್ತಿವೆ. ಇದರ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕು. ಬೇಲಿಕೇರಿ ಬಂದರಿನ ಸುಮಾರು 35 ಎಕರೆ ಪಿಡಬ್ಲ್ಯೂಡಿಯಿಂದ ನಿಮ್ಮ ಪೋರ್ಟ್ ಇಲಾಖೆಗೆ ಏನು ಹಸ್ತಾಂತರವಾಗಿದೆ ಇಲ್ಲಿ ಏನು ಮಾಡಿದಿರಿ? ಮತ್ತೊಂದು ಕಾರವಾರ ಬಂದರನ್ನು ಖಾಸಗಿ ವ್ಯಕ್ತಿಗಳಿಗೆ ಕೊಡುತ್ತಿರುವ ಬಗ್ಗೆ ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಮುಖ್ಯವಾಗಿ ಅಭಿವೃದ್ಧಿ ವಿಚಾರದಲ್ಲಿ ಈ ಬಂದರುಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಸುನೀಲ್ ವಿ. ಹೆಗಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬೇಲಿಕೇರಿ ಬಂದರಿನಲ್ಲಿ 72,800 ಚ.ಮಿ. ಭೂಮಿ ಅತಿಕ್ರಮಣವಾಗಿದೆ ಎಂದು ಹೇಳಿದ್ದಾರೆ, ಇದು *2004–05* ರಿಂದ ಅತಿಕ್ರಮಣವಾಗಿದೆ. 2004–05 ರಿಂದ

ಇವತ್ತಿನವರೆಗೆ ಅತಿಕ್ರಮಣ ಮಾಡಿದವರಿಗೆ ಲೀಸ್ ಕೊಡಲಿಲ್ಲ, ಅವರಿಗೆ ದಂಡ ಹಾಕಿ ದುಡ್ಡು ವಸೂಲಿ ಮಾಡಲಿಲ್ಲ. ಈ ರೀತಿಯ ಅವ್ಯವಹಾರ ಆಗಿದೆ. ಅಲ್ಲಿ ಒಬ್ಬರು ಕ್ಯಾಪ್ಟನ್ : ಮೋಹನ್ ಎನ್ನುವವರೊಬ್ಬರು ಇದ್ದಾರೆ. ಇಡೀ ಕರ್ನಾಟಕ ರಾಜ್ಯಕ್ಕೆ ಅವರೊಬ್ಬರೆ ಕ್ಯಾಪ್ಟನ್. ಅವರ ಬೇಜವಾಬ್ದಾರಿಯಿಂದ ಇದಾಗಿದೆ. ಅವರ ಮೇಲೆ ಇವತ್ತಿನವರೆಗೆ ಕ್ರಮ ಆಗಲಿಲ್ಲ. ಇಷ್ಟು ಚದರ ಅಡಿ ಜಮೀನು ಅತಿಕ್ರಮಣವಾಗಿದ್ದರೂ ಇನ್ನೂ ಏನೂ ಕ್ರಮವಾಗಿಲ್ಲ. ಇದರಲ್ಲಿ ಮುಖ್ಯವಾಗಿ ಒಂದು ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಇಲ್ಲಾಂದ್ರೆ ಅವರಿಗೆ ದಂಡ ಹಾಕಿ ಲೀಸ್ ಕೊಡುವಂಥ ವ್ಯವಸ್ಥೆಯಾದರೂ ಆಗಬೇಕು. ಎರಡನೇಯದಾಗಿ, ಆ ಬಂದರು ಅಭಿವೃದ್ಧಿಯಾಗಲಿಲ್ಲ. ಆ ಬಂದರು ಇರುವಂಥ ಏರಿಯಾದಲ್ಲಿರುವ ರಸ್ತೆಗಳು ಸರಿಯಿಲ್ಲ. ಅಲ್ಲಿ ಜನಜೀವನಕ್ಕೆ ಪರಿಸರ ಪೂರ್ವಕವಾದಂಥ ವಾತಾವರಣ ಇಲ್ಲ. ಹೀಗಾಗಿ ಆ ಬಂದರು ಎಲ್ಲಾ ದೃಷ್ಟಿಯಿಂದಲೂ ಅಭಿವೃದ್ಧಿಯಾಗುವ ಅವಶ್ಯಕತೆಯಿದೆ. ಅಧಿಕಾರಿಯಾಗಿರುವ ಕ್ಯಾಪ್ಟನ್ ಮೋಹನ್ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಇದರ ಜೊತೆಗೆ 10--11 ಜನರೇನು ಅತಿಕ್ರಮಣ ಮಾಡಿದ್ದಾರೆ, ಆ ಜಮೀನು ತೆಗೆದುಕೊಳ್ಳಿ ಇಲ್ಲಾಂದ್ರೆ ಅವರಿಗೆ ದಂಡ ಹಾಕಿ regularize ಮಾಡಿ ಸರಕಾರಕ್ಕೆ ದುಡ್ಡು ವಸೂಲಿ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಜೆ. ಕೃಷ್ಣ ಪಾಲೇಮಾರ್: ನಮ್ಮ ಸದಸ್ಯರು, ಈಗಾಗಲೇ ಬೇಲಿಕೇರಿ ಬಂದರಿಗೆ 35 ಎಕರೆ ಪಿಡಬ್ಲ್ಯೂಡಿ ಯಿಂದ ಹಸ್ತಾಂತರವಾಗಿದೆ ಇದನ್ನು ಏನು ಮಾಡುತ್ತೀರಿ ಎಂದು ಕೇಳಿದರು. ಈ ಭೂಮಿಯನ್ನು ಈಗಾಗಲೇ ನಮಗೆ ಸ್ವಂತಕ್ಕೆ ಅಂದರೆ ಟ್ರಕ್ ಟರ್ಮಿನಲ್ ಮಾಡುವ ಉದ್ದೇಶದಿಂದ ಅದನ್ನು ನಾವು ಇಟ್ಟುಕೊಂಡಿದ್ದೇವೆ. ಇದನ್ನು ಯಾರಿಗೂ ನಾವು ಹಸ್ತಾಂತರಿಸುವುದಿಲ್ಲ. ಅಲ್ಲಿ ಟ್ರಕ್ ಟರ್ಮಿನಲ್ ಮಾಡುತ್ತೇವೆ. ಅಲ್ಲಿ ಇರುವ ಜನರಿಗೆ, ಲಾರಿ ಮಾಲೀಕರಿಗೆ, ರಫ್ತು ಮಾಡುವವರಿಗೆ ಹೆಚ್ಚಿನ ಅನುಕೂಲವನ್ನು ಆ ಬಂದರಿನಲ್ಲಿ ಮಾಡಿ ಕಲ್ಪಿಸಿ ಕೊಡುತ್ತೇವೆ. ಅದಲ್ಲದೆ ಕಾರವಾರ ಬಂದರನ್ನು ಖಾಸಗಿ ವ್ಯಕ್ತಿಗಳಿಗೆ ಕೊಡುವುದರ ಬಗ್ಗೆ pp ಯಲ್ಲಿ 6 short list ಮಾಡಿದ್ದೇವೆ. ಅದರ ಬಗ್ಗೆ ಮುಂದಿನ ಕ್ರಮಕ್ಕಾಗಿ ಆರ್ಥಿಕ ಇಲಾಖೆಗೆ ಕಳುಹಿಸಿಕೊಡಲಾಗಿದೆ. ಮತ್ತೆ ಕ್ಯಾಬಿನೆಟ್‌ನ ಅನುಮೋದನೆ ಕೂಡ ಇನ್ನು ಪೆಂಡಿಂಗ್ ಇದೆ. ಇದೆಲ್ಲಾ ಆದ ಮೇಲೆ ಅದನ್ನು ಖಾಸಗಿಯವರಿಗೆ ಕೊಡುವಂಥ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ 2004-05ರಿಂದ ಅಲ್ಲಿ

ಅತಿಕ್ರಮಣ ಆಗಿರುವ ಬಗ್ಗೆ ಉತ್ತರವನ್ನು ನಾವು ಕೊಟ್ಟಿದ್ದೇವೆ. 72,800 sq.mt. ಜಾಗವನ್ನು ಅತಿಕ್ರಮಣ ಮಾಡಿ ಸದರಿ ಜಾಗವನ್ನು ಮೂರು ಕಂಪನಿಯವರು ಉಪಯೋಗ ಮಾಡುತ್ತಿದ್ದಾರೆ. ಇದನ್ನು ಖಾಸಗಿಯವರಿಗೆ ಕೊಡಬೇಕೋ ಅಥವಾ ಬಿಡಬೇಕೋ ಎಂಬುದರ ಬಗ್ಗೆ ತನಿಖೆ ನಡೆಸಿ ಮುಂದಿನ ದಿನಗಳಲ್ಲಿ Landing and Shippingಗೆ ಉಪಯೋಗ ಮಾಡುವುದಕ್ಕೆ ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಸರ್ಕಾರಕೆ ಆಗತಕ್ಕಂಥ ನಷ್ಟವನ್ನು ತಪ್ಪಿಸುವುದಕ್ಕಾಗಿ ಆದಷ್ಟು ಬೇಗ ಅದೆ ಬಗ್ಗೆ ಕ್ರಮ ತೆಗೆದುಕೊಂಡು ಅದಕ್ಕೆ ಬೇಕಾಗುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಇ) ಲಿಖಿತ ಮೂಲಕ ಉತ್ತರಿಸುವ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ಸಂಸದೀಯ ವ್ಯವಹಾರ ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 24–7–2009ರ, 12ನೇ ಪಟ್ಟಿಯ "ಉ" ಸಮೂಹದ ಲಿಖಿತ ಮೂಲಕ ಉತ್ತರಿಸುವ 46 ಪ್ರಶ್ನೆಗಳ ಪೈಕಿ 42 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು. (ಅನುಬಂಧ–1)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ 46 ಪ್ರಶ್ನೆಗಳ ಪೈಕಿ 42 ಪ್ರಶ್ನೆಗಳಿಗೆ ಮಾತ್ರ ಉತ್ತರ ಒದಗಿಸಿದ್ದಾರೆ. ಇನ್ನು ನಾಲ್ಕು ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಇದೇ ರೀತಿಯಾಗಿ ಪ್ರತಿ ದಿವಸ ಕೂಡ ಆಗುತ್ತಿದೆ. ಸದನ ಮುಗಿಯುವುದಕ್ಕೆ ಇನ್ನು ಮೂರು ದಿವಸ ಬಾಕಿ ಉಳಿದಿರುವಾಗ ಈ ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ. ಮಾಹಿತಿ ತರಿಸಿಕೊಂಡು ಕೊಡುವುದಕ್ಕೆ ಸ್ವಲ್ಪ ಡಿಲೇ ಆಗುತ್ತದೆ. ಆದರೆ, ಸದನ ಮುಗಿಯುವುದ ರೊಳಗೆಯಾದರು ಉತ್ತರ ತರಿಸಿ list out ಮಾಡಬೇಕಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಸದಸ್ಯರು ಹೇಳಿರುವುದು ಸೂಕ್ತವಾಗಿದೆ. ಸದನ ಮುಗಿಯುವುದರೊಳಗೆ ಉತ್ತರ ತರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇಲ್ಲಿ ಸದಸ್ಯರೆಲ್ಲರೂ ಕೇಳಿರುವ ಪ್ರಶ್ನೆಗಳಿಗೆ ಉತ್ತರ ಕೊಡಿಸುವಂಥದ್ದು ನಮ್ಮ ಜವಾಬ್ದಾರಿ ಖಂಡಿತ ಈ ಕೆಲಸವನ್ನು ಮಾಡುತ್ತೇವೆ.